50 ಸುವರ್ಣ ಸಂಭ್ರಮ

# ಬೆರಳ ತುದಿಯಲ್ಲಿ ವಿಶ್ವ ಮತ್ತು ವಿವೇಕ!

ಅಂತರ್ಜಾಲ ಬಳಕೆ ಹೆಚ್ಚುತ್ತಿರುವುದು ಆಧುನಿಕ ಜಗತ್ತಿಗೆ ಭಾರತ ತನ್ನನ್ನು ತಾನು ಪರಿಣಾಮಕಾರಿಯಾಗಿ ಒಡ್ಡಿಕೊಳ್ಳುತ್ತಿರುವ ಸೂಚನೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಕಂಪ್ಯೂಟರೀಕರಣದ ಭರಾಟೆಯ ಜೊತೆ ಸೈಬರ್ ಅಪರಾಧಗಳ ಸಂಖ್ಯೆಯೂ ದೇಶದಲ್ಲಿ ಹೆಚ್ಚುತ್ತಿದೆ.

ಆರೋಗ್ಯ, ಆಹಾರ, ಶಿಕ್ಷಣ, ಹೆಣ್ಣುಮಕ್ಕಳ ಸುರಕ್ಷತೆ, ಮಕ್ಕಳ ಹಕ್ಕುಗಳು– ಹೀಗೆ, ಅಭಿವೃದ್ಧಿ ವಿಚಾರಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ನಮ್ಮದು ಆಮೆ ನಡೆ. ಆದರೆ, ಸೈಬರ್ ಕ್ಷೇತ್ರದಲ್ಲಿನ ಚಟುವಟಿಕೆಗಳಲ್ಲಿ ಮಿಂಚಿನ ವೇಗ. ಇದಕ್ಕೆ ಇಂಬು ನೀಡುವಂತೆ, ಈ ವರ್ಷದ ಕೊನೆಯ ವೇಳೆಗೆ ಅಂತರ್ಜಾಲದ ಬಳಕೆದಾರರ ಪಟ್ಟಿಯಲ್ಲಿ ಭಾರತೀಯರು ಅಮೆರಿಕನ್ನರನ್ನು ಹಿಂದಿಕ್ಕಲಿದ್ದಾರೆ ಎನ್ನುವ ಸುದ್ದಿ ಬಂದಿದೆ. ರಸ್ತೆ, ವಿದ್ಯುತ್ ತಲುಪದ ಕುಗ್ರಾಮಗಳನ್ನೂ ಮೊಬೈಲ್ ತಲುಪಿರುವ ಹೊತ್ತಿನಲ್ಲಿ ಈ ಸಾಧನೆ ಅಸಹಜವೇನಲ್ಲ. ಪೇಟೆಗಳ ಜನರೊಂದಿಗೆ ಗ್ರಾಮೀಣ ಪ್ರದೇಶಗಳ ಜನ ಕೂಡ ದೊಡ್ಡ ಪ್ರಮಾಣದಲ್ಲಿ ಮೊಬೈಲ್ ಮೂಲಕ ಇಂಟರ್ನೆಟ್ ಸವಲತ್ತಿಗೆ ತೆರೆದುಕೊಂಡಿರುವುದರಿಂದ, ಅಂತರ್ಜಾಲದ ಪ್ರಮುಖ ಬಳಕೆದಾರನಾಗಿ ಭಾರತ ಹೊರಹೊಮ್ಮುತ್ತಿದೆ.

ಇಂಟರ್ನೆಟ್ ಬಳಕೆಯಲ್ಲಿ 60 ಕೋಟಿ ಬಳಕೆದಾರರನ್ನು ಹೊಂದಿರುವ ಚೀನಾ ಹಾಗೂ 27.9 ಕೋಟಿ ಜಾಲಿಗರನ್ನು ಹೊಂದಿರುವ ಅಮೆರಿಕ ಮೊದಲೆರಡು ಸ್ಥಾನದಲ್ಲಿವೆ. ಪ್ರಸ್ತುತ 27.8 ಕೋಟಿ ಬಳಕೆದಾರರ ಮೂಲಕ ಮೂರನೇ ಸ್ಥಾನದಲ್ಲಿರುವ ಭಾರತ, ಈ ಸಂಖ್ಯೆಯನ್ನು 2014ರ ಡಿಸೆಂಬರ್ ವೇಳೆಗೆ 30 ಕೋಟಿಯನ್ನು ದಾಟುವ ಮೂಲಕ ಎರಡನೇ ಸ್ಥಾನಕ್ಕೆ ಜಿಗಿಯಲಿದೆ. ‘ಇಂಟರ್ನೆಟ್ ಅಂಡ್ ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ’ದ ವರದಿ ಈ ಬೆಳವಣಿಗೆಯನ್ನು ದಾಖಲಿಸಿದೆ. ವರದಿಯ ಪ್ರಕಾರ, ಭಾರತದಲ್ಲಿ 10 ಕೋಟಿ ಇಂಟರ್ನೆಟ್ ಬಳಕೆದಾರರು ರೂಪುಗೊಳ್ಳಲು 10 ವರ್ಷಗಳ ಸಮಯ ಬೇಕಾಯಿತು. ಆದರೆ, ನಂತರದ ಮೂರು ವರ್ಷಗಳಲ್ಲಿ ಈ ಸಂಖ್ಯೆ 20 ಕೋಟಿಗೆ ಜಿಗಿದರೆ, ಕಳೆದೊಂದು ವರ್ಷದ ಅವಧಿಯಲ್ಲಿ ಮತ್ತೂ 10 ಕೋಟಿ ಹೆಚ್ಚಿಸಿಕೊಳ್ಳುವ ಮೂಲಕ 30 ಕೋಟಿ ದಾಟುವ ಹುಮ್ಮಸ್ಸಿನಲ್ಲಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಅಂತರ್ಜಾಲ ಬಳಕೆದಾರರ ಸಂಖ್ಯೆ ಏರಿಕೆ ಪ್ರಮಾಣದಲ್ಲಿದೆ. ಪ್ರಸ್ತುತ 10.1 ಕೋಟಿ ಗ್ರಾಮೀಣರು ಅಂತರ್ಜಾಲ ಬಳಸುತ್ತಿದ್ದು, 2015ರ ಜನವರಿ ವೇಳೆಗೆ ಈ ಸಂಖ್ಯೆ 11.2 ಕೋಟಿ–ಯಾಗುವ ನಿರೀಕ್ಷೆಯಿದೆ. ಅಂದಹಾಗೆ, ಇಷ್ಟೊಂದು ಜನ ಯಾಕಾಗಿ ಇಂಟರ್ನೆಟ್ ಬಳಸುತ್ತಾರೆ? ನಗರ ಪ್ರದೇಶದಲ್ಲಿ ಶೇ 93ರಷ್ಟು ಜನರು ಮಾಹಿತಿಗಾಗಿ ಅಂತರ್ಜಾಲ ಬಳಸುತ್ತಾರೆ. ಸಂವಹನ ಮತ್ತು ಸಾಮಾಜಿಕ ಜಾಲತಾಣಗಳ ಕಾರಣದಿಂದಲೂ ಅಂತರ್ಜಾಲದಲ್ಲಿ ಇಣುಕುವವರಿದ್ದಾರೆ. ಆದರೆ, ಗ್ರಾಮೀಣ ಪ್ರದೇಶಗಳ ವಿಷಯಕ್ಕೆ ಬಂದರೆ, ಅಲ್ಲಿ ಇಂಟರ್ನೆಟ್ ಹೆಚ್ಚು ಬಳಕೆಯಾಗುವುದು ಮನರಂಜನೆಯ ಉದ್ದೇಶಗಳಿಗೆ.

ಅಂತರ್ಜಾಲ ಬಳಕೆ ಹೆಚ್ಚುತ್ತಿರುವುದು ಆಧುನಿಕ ಜಗತ್ತಿಗೆ ಭಾರತ ತನ್ನನ್ನು ತಾನು ಪರಿಣಾಮಕಾರಿಯಾಗಿ ಒಡ್ಡಿಕೊಳ್ಳುತ್ತಿರುವ ಸೂಚನೆ ಎನ್ನುವುದರಲ್ಲಿ ಅನುಮಾನವಿಲ್ಲ. ಜಾಗತೀಕರಣದ ಪರಿಕಲ್ಪನೆ ತನ್ನ ನಿಜವಾದ ಅರ್ಥದಲ್ಲಿ ಸಾಧ್ಯಗೊಂಡಿರುವುದು ಮೊಬೈಲ್ ಫೋನ್ ಮತ್ತು ಅಂತರ್ಜಾಲಕ್ಕೆ ಸಂಬಂಧಿಸಿದಂತೆ. ನಗರ ಪ್ರದೇಶಗಳ ಜನರಂತೂ ಮನೆಯಲ್ಲಿ ಕೂತೇ ಅಂತರ್ಜಾಲದ ಮೂಲಕ ಮಾರುಕಟ್ಟೆಗೆ ಲಗ್ಗೆಯಿಟ್ಟಿದ್ದಾರೆ. ಈ ನಿಟ್ಟಿನಲ್ಲಿನ ಬೆಳವಣಿಗೆ ಸ್ವಾಗತಾರ್ಹವಾದರೂ, ತಂತ್ರಜ್ಞಾನದ ಅಪಬಳಕೆಯತ್ತಲೂ ನಾವು ಗಮನಹರಿಸಬೇಕಿದೆ. ಕಂಪ್ಯೂಟರೀಕರಣದ ಭರಾಟೆಯ ಜೊತೆಗೇ ಸೈಬರ್ ಅಪರಾಧಗಳ ಸಂಖ್ಯೆಯೂ ಹೆಚ್ಚುತ್ತಿದೆ. ಮಾಹಿತಿ ದುರುಪಯೋಗ, ಬ್ಯಾಂಕ್ ಖಾತೆಗಳಿಗೆ ಕನ್ನ, ಸ್ನೇಹದ ಹೆಸರಲ್ಲಿ ವಂಚನೆಯ ಕೃತ್ಯಗಳು ಹೆಚ್ಚುತ್ತಿವೆ. ಮತ್ತೊಂದೆಡೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಅದ್ಭುತ ವೇದಿಕೆಗಳಾಗಿರುವ ಸಾಮಾಜಿಕ ಜಾಲತಾಣಗಳು ವೈಯಕ್ತಿಕ ತೇಜೋವಧೆ, ವಂಚನೆ, ಮಾತಿನ ಬಲಪ್ರದರ್ಶನಕ್ಕೆ ವೇದಿಕೆಗಳಾಗಿವೆ.

ಸಾಮಾಜಿಕ ಶಾಂತಿ ಕದಡುವಂತಹ ಚಟುವಟಿಕೆಗಳಿಗೆ ಕೂಡ ಇಂಟರ್ನೆಟ್ ಬಳಕೆಯಾಗುತ್ತಿದೆ. ಇತ್ತೀಚೆಗೆ ದೇಶದ ವಿವಿಧೆಡೆಗಳಲ್ಲಿ ಸಂಭವಿಸಿದ ಹಿಂಸಾಚಾರದ ಪ್ರಕರಣಗಳಲ್ಲಿ ಅವುಗಳಿಗೆ ಪ್ರಚೋದನೆ ನೀಡುವಂತಹ ಬರವಣಿಗೆಗಳಿಗೆ ಅಂತರ್ಜಾಲ ವೇದಿಕೆಯಾಗಿತ್ತು. ಭಯೋತ್ಪಾದಕರ ಚಟುವಟಿಕೆಗಳಿಗೆ ಕೂಡ ಇದೇ ಅಂತರ್ಜಾಲ ಬಳಕೆಯಾಗುತ್ತಿದೆ. ಕಾಮ ಮತ್ತು ಹಿಂಸೆಯನ್ನು ಉತ್ತೇಜಿಸುವ ಸರಕುಗಳಿಗಂತೂ ಇಂಟರ್ನೆಟ್ ತನ್ನ ಆರಂಭದ ದಿನಗಳಿಂದಲೂ ಅಕ್ಷಯಪಾತ್ರೆ. ಶಾಸಕರು ನೀಲಿಚಿತ್ರ ವೀಕ್ಷಿಸಿದ ಘಟನೆಗೆ ಕರ್ನಾಟಕದ ವಿಧಾನಸಭೆ ಸಾಕ್ಷಿಯಾದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪಾರದರ್ಶಕತೆ ಹಾಗೂ ತ್ವರಿತಗತಿಯ ಕಾರ್ಯ ನಿರ್ವಹಣೆ ಅಂತರ್ಜಾಲದ ಗುಣವಿಶೇಷಣಗಳಲ್ಲಿ ಮುಖ್ಯವಾದವು. ಈ ಕಾರಣಕ್ಕೆ ಸರ್ಕಾರದ ಅನೇಕ ಇಲಾಖೆಗಳು ಕಂಪ್ಯೂಟರೀಕರಣಗೊಂಡಿವೆ. ಆದರೂ ಸರ್ಕಾರಿ ಕೆಲಸಗಳು ತೆವಳುವುದು ತಪ್ಪಿಲ್ಲ ಹಾಗೂ ಪಾರದರ್ಶಕತೆ ಎನ್ನುವುದು ಮರೀಚಿಕೆಯಾಗಿಯೇ ಉಳಿದಿದೆ. ಇಂಥ ಸಂದರ್ಭದಲ್ಲಿ ಅಂತರ್ಜಾಲದ ಬಳಕೆಯಲ್ಲಿ ದೇಶ ಸಾಧಿಸುತ್ತಿರುವ ಪ್ರಗತಿಯ ಅಂಕಿಅಂಶಗಳಿಗೆ ಹೆಚ್ಚಿನ ಮಹತ್ವ ಕೊಡಬೇಕಿಲ್ಲ. ಅಂತರ್ಜಾಲ ಮತ್ತು ಮೊಬೈಲ್ ಬಳಕೆಯ ಮೂಲಕ ನಮ್ಮ ಬೆರಳ ತುದಿಗಳಿಗೆ ವಿಶ್ವ ನಿಲುಕುತ್ತಿರುವ ದಿನಗಳಿವು. ಅದೇ ಬೆರಳುಗಳಿಗೆ ವಿವೇಕದ ಸ್ಪರ್ಶವೂ ಆದಲ್ಲಿ ಅಂತರ್ಜಾಲದ ಬಳಕೆಯ ನಿಜವಾದ ಉಪಯೋಗಗಳು ಸಮಾಜಕ್ಕೆ ದೊರೆಯುತ್ತವೆ.

■ ರಘುನಾಥ ಚ.ಹ.

